ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೭ರ ನೋಂದಣಿ(ಕರ್ನಾಟಕ ತಿದ್ದುಪಡಿ)ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : ''೧೯೮೭ರ ನೋಂದಣಿ(ಕರ್ನಾಟಕ ತಿದ್ದುಪಡಿ)ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮಂತ್ರಿ ಮಂಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ದಿನದ ಕಾರ್ಯಕಲಾಪ ಮುಗಿಯಲು ಇನ್ನೂ ಮುಕ್ಕಾಲು ಗಂಡೆ ಸಮಯವಿರುವುದರಿಂದ ಈ ದಿನದ ಕಾರ್ಯಕಲಾಪದ ಪಟ್ಟಿಯಲ್ಲಿರುವ ಎರಡನೇ ತಿದ್ದುಪಡಿ ವಿಧೇಯಕವನ್ನು ಈ ಪರ್ಯಾಲೋಚಿಸಬಹುದೆಂದು ಸೂಚಿಸುತ್ತೇನೆ. ಹಾಗೂ ಇದನ್ನು ಹೆಚ್ಚಿನ ಚರ್ಚೆ ಇಲ್ಲದೆ ಪಾಸ್ ಮಾಡಿಕೊಡಬೇಕೆಂದು ಮಾನ್ಯ ಶ್ರೀನಿವಾಸ ಅವರಲ್ಲಿ ಹಾಗೂ ಮಾನ್ಯ ಮಾದೇಗೌಡರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ತಾವು ಪ್ರಸ್ತಾವವನ್ನು ಮಂಡನೆ ಮಾಡಬಹುದು.

೧೯೮೭ರ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಆನೈತಿಕ ವ್ಯಪಹಾರದ ಅಪರಾದಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ೧೯೮೭ರ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಆನೈತಿಕ ವ್ಯಪಹಾರದ ಅಪರಾಧಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಮಾನ್ಯ ಗೃಹಮಂತ್ರಿಗಳ ಪರವಾಗಿ ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಹೋದವರ್ಷ ನಾವು ಈ ಬಗ್ಗೆ ಒಂದು ಹೊಸ ಕಾನೂನನ್ನು ಜಾರಿಗೆ ತಂದಿದ್ದೆವು. ಅದರ ಪ್ರಕಾರ ವಿಚಾರಣೆಯಿಲ್ಲದೆ ೧೨ ತಿಂಗಳ ಕಾಲ ಈ ಕಾನೂನಿನಲ್ಲಿ ಬರುವಂತಹವರನ್ನು ಜೈಲಿನಲ್ಲಿಡಬಹುದು. ಈ ಕಾನೂನಿನ ಪ್ರಕಾರ ಸಮಾಜ ವಿರೋಧಿ ಶಕ್ತಿಗಳ ವಿರುದ್ಧ ಕ್ರಮ ತೆಗೆದುಕೊಂಡು ಕೆಲವರನ್ನು ಜೈಲಿನಲ್ಲಿಟ್ಟಾಗ, ಅವರುಗಳು ಇದನ್ನು ಪ್ರಶ್ನೆ ಮಾಡಿ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಹಾಕಿದರು. ನಂತರ ಹೈಕೋರ್ಟಿನವರು ಈ ಕಾನೂನಿನಲ್ಲಿರುವಂತಹ ಕೆಲವು ದೋಷಗಳನ್ನು ಎತ್ತಿ ತೋರಿಸಿ ಸ್ವಾತಂತ್ರ್ಯವಿಲ್ಲದವರನ್ನು ರಿಲೀಜ್ ಮಾಡಿದರು. ಈಗ ನಾವು ಹೈಕೋರ್ಟಿನವರು ತೋರಿಸಿರುವಂತಹ ದೋಷಗಳನ್ನು ಸರಿಪಡಿಸಿ, ಈ ದೋಷಗಳು ಮತ್ತೆ ಬರಬಾರದೆಂದು ಕಾರಣಕ್ಕೋಸ್ಕರ ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಮ್ಮ ಈ ಸಭೆ ಮತ್ತು ಮೇಲ್ಮನೆಯವರು ಒಪ್ಪಿದ ಮೇಲೆ ಕೇಂದ್ರಸರ್ಕಾರದ ಒಪ್ಪಿಗೆ ಕೂಡ ಬೇಕಾಗುತ್ತದೆ. ೨ನೇ ಪೇಜಿನಲ್ಲಿ ಈ ರೀತಿ ಇದೆ:

''6A. Grounds of detention verable.–Where a person has been detained in pursuance of an order of detention under sub-section (1) or sub-section (2) of section 3, which has been made on two or more grounds, such order of detention shall be deemed to have been made separately on each of such grounds, and accordingly.—

(a) such order shall not be deemed to be invalid or inoperative merely because one or some of the grounds is or are,–

(i) vague;

(ii) non-existent;

(iii) not-relevant;

(iv) not connected or not proximately connected with such person ; or

(v) invalid for any other reason whatsoever; and it is not, therefore, possible to hold that the Government or the officer making such order would have been satisfied as provided in sub-section (1) of section 3 with reference to the remaining ground or grounds."

ಬಹಳ ಮುಖ್ಯವಾದುದು ಇದರಲ್ಲಿ ನಾವು ತಂದಿರತಕ್ಕಂಥ ತಿದ್ದುಪಡಿ. ಆಮೇಲೆ ಎರಡನೆಯದು, ಹೊಸದಾಗಿ ಸೇರಿಸಿರುವುದನ್ನು ಇದರಲ್ಲಿ ಸೇರಿಸಿಕೊಳ್ಳಬೇಕು.

Amendment of section 14. In section 14 of the principal Act, for sub-section (2) the following sub-section shall be substituted, namely—.

"(2) The revocation on or expiry of a detention order (hereinafter in this sub-section referred to as the earlier detention order) shall not, whether such earlier detention order has been made before or after the commencement of the Karnataka Prevention of Dangerous activities of Boot-Leggers, Drug-Offenders, Goondas, Immoral Traffic Offenders and Slum-Grabbers (amendment) act, 1987, bar the making of another detention order (hereinafter in this sub-section referred to as the subsequent order) under section 3 against the same person." ಹಿಂದಿನ ಅಮೆಂಡ್‌ಮೆಂಟ್ ಆಕ್ಟ್‌ನಲ್ಲಿ ಏನು ಕ್ರಮ ತೆಗೆದುಕೊಂಡಿದ್ದರು ಅನು ಅನೂರ್ಜಿತವಾಗ ತಕ್ಕಂಥಾದ್ದಲ್ಲ ಎನ್ನುವುದು ತಿದ್ದುಪಡಿ. ಯಾವ ಉದ್ದೇಶಕ್ಕೂ ಸ್ಕರ ಮೂಲ ಕಾನೂನನ್ನು ತಂದೆವೋ ಹೈಕೋರ್ಟಿನವರು ಈ ದೋಷ ಇರುವುದರಿಂದ ಅದನ್ನು ಅನೂರ್ಜಿತಗೊಳಿಸಿದರು. ಆ ದೋಷವನ್ನು ಸರಿಪಡಿಸಿ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದವರ ಮೆ ಲೆ ಪೂರ್ಣ ನಿಯಂತ್ರಣ ಹಾಕಿ ಸಮಾಜ ವಿರೋಧಿ ಶಕ್ತಿಗಳನ್ನು, ಜನರನ್ನು ಸಂಪೂರ್ಣವಾಗಿ ಹತೊ ಟಿಯಲ್ಲಿಟ್ಟು ಕೊಳ್ಳತಕ್ಕಂಥ ಕಾರ್ಯಕ್ರಮ ಇದು. ಇದು ಬೊಂಬಾಯಿಯಲ್ಲಿದೆ, ಮಧ್ಯ ಪ್ರದೆ ಶದಲ್ಲಿದೆ, ಬಿಲ್ಲಾ ಇದೆ ಆದುದರಿಂದ ಮಾನ್ಯ ಸದಸ್ಯರು ಇದಕ್ಕೆ ತಮ್ಮ ಒಪ್ಪಿಗೆ ಕೊಡಬೇಕು ಎಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

†ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, ೧೯೮೭ನೇ ಇಸವಿಯ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ನೈತಿಕ ಆಪರಾಧಿಗಳು, ಕೊಳೆಗೆರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕ್ಕಾಗಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ ಏನಿದೆ ಇದನ್ನು, ನಾನು ವಿರೋಧಿಸಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಆದರ ಅರ್ಥ ನಾನು ಇದರಲ್ಲಿ ನಮೂದಿಸಿರುವ ಪ್ರಗಳ ಪರವಾಗಿದ್ದೇನೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಲಾಗಿದೆ.

ಎಂದು ಅಲ್ಲ. ಈ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ಅಪರಾಧಿಗಳು, ಕೊಳೆಗೇರಿಗಳನ್ನು ವಶಪಡಿಸಿಕೊಳ್ಳುವವರು, ಇವರ ಪರವಾಗಿ ನಾನು ವಕಾಲತ್ತು ವಹಿಸುತ್ತಾ ಇಲ್ಲ. ಆದರೆ ತಾತ್ವಿಕವಾಗಿಯೂ ಕೂಡ ಅಲ್ಲ. ನಾನು ಇಂತಹ ವಿಚಾರಗಳಲ್ಲಿ ಕಾನೂನು ಸ್ವಲ್ಪ ಬಿಗಿಯಾಗಿರಬೇಕು. ಒಂದು ದೃಷ್ಟಿಯಿಂದ ಸ್ವಲ್ಪಮಟ್ಟಿಗೆ ವಿಧೇಯಕದ ಸ್ವಾತಂತ್ರ್ಯಕ್ಕೆ ಬಾಧಕವಾಗಿದ್ದರೂ ಕೂಡ ಇಡೀ ಸಮಾಜದ ಸ್ವಾಸ್ಥ್ಯದ ದೃಷ್ಟಿಯಿಂದ ಇಂತಹ ಕಾನೂನುಗಳು ಅಗತ್ಯವಾಗುತ್ತವೆ ಎನ್ನುವ ವಿಷಯವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನಿಜ ಹೇಳಬೇಕೆಂದರೆ ವಿರೋಧ ಇದ್ದವರು ಮಾನ್ಯ ಮಂತ್ರಿಗಳಾದ ಲಕ್ಷ್ಮೀಸಾಗರ್ ಮತ್ತು ಅವರ ಸ್ನೇಹಿತರುಗಳೇ. ಹಿಂದೆ ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರ ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟಂತೆ ಇಂಥ ವ್ಯಕ್ತಿಗಳನ್ನು ನಿಯಂತ್ರಿಸುವುದಕ್ಕೆ ಕಾನೂನು ತಂದಾಗ, ಇಡೀ ನಮ್ಮ ಆರ್ಥಿಕ ವ್ಯವಸ್ಥೆಗೆ ಪರ್ಯಾಯ ಆರ್ಥಿಕ ವ್ಯವಸ್ಥೆಯನ್ನುಂಟು ಮಾಡಿದ್ದಂಥವರನ್ನು ನಿಯಂತ್ರಣ ಮಾಡುವುದಕ್ಕೆ ಹೊರಟಾಗ.. ... .

೪–೩೦ ಪಿ.ಎಂ.

ಶ್ರೀ ಸಾಲೇರ್ ಸಿದ್ದಪ್ಪ.—ಅಂಥವರನ್ನು ಬಿಟ್ಟು ನಮ್ಮಂಥವರನ್ನು ನಿಯಂತ್ರಣ ಮಾಡುವುದಕ್ಕೆ ಹೊರಟರು.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಅಂಥವರ ಪರವಾಗಿ ವಕಾಲತ್ತು ಮಾಡುವುದಕ್ಕೆ ಹೋಗಿದ್ದಕ್ಕೆ ಒಳಗೆ ಹಾಕಿದರು. ಯಾವಾಗ ಅಂಥ ಕಾನೂನುಗಳನ್ನು ವಿರೋಧಿಸಿ ನೀವು ಚಟುವಟಿಕೆಗಳನ್ನು ಪ್ರಾರಂಭ ಮಾಡಿದರೋ ನೀವು ಹೀರೋಗಳಾದಿರಿ, ಅವರು ಜೈಲಿನಲ್ಲಿ ಉಳಿದರು. ಇದು ಒಂದು ಕರಾಳ ಪುಸ್ತಕ, ವ್ಯಕ್ತಿ ಸ್ವಾತಂತ್ರ್ಯ ಅಪಹರಣ ಮಾಡುವಂಥದ್ದು ಎಂದು ಬಣ್ಣಿಸಿದಿರಿ. ಆದರೆ ನೀವು ಈ ಕಾನೂನು ತಂದಾಗ, ಸ್ವಚ್ಛಂಧವಾದಂಥ ವ್ಯಕ್ತಿ ಸ್ವಾತಂತ್ರ್ಯದ ಪ್ರತಿಪಾದಕರು, ಇಡೀ ರಾಷ್ಟ್ರಕ್ಕೆ ಕಂಟಕರಾದಂಥ ವ್ಯಕ್ತಿಗಳನ್ನು ಬಂಧಿಸುವುದಕ್ಕೆ ಕಾನೂನು ಮಾಡಿದಾಗ ವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಪ್ರತಿಧ್ವನಿಸಿದವರು ಊರೊಳಗೆ, ಕೇರಿಗಳಲ್ಲಿ ಪುಂಡರುಗಳು, ಪೋಕರಿಗಳನ್ನು ಹಿಡಿಯುವುದಕ್ಕೆ ಇಂಥ ಕಾನೂನು ಏತಕ್ಕೆ ತಂದಿರಿ ಎಂದು ಕೇಳಿದ್ದೆವು. ರಾಷ್ಟ್ರದಲ್ಲಿ ಸ್ಮಗ್ಲರ್ಸ್ ಜಾಲ ಎಷ್ಟು ದೊಡ್ಡದಾಗಿರುತ್ತದೆ ಎಂದರೆ, ಜಾಲಪ್ಪನವರಷ್ಟು ಸರಳ ಅಲ್ಲ. ಅವರ ಸಹಕಾರವೇ ಬೇರೆ. ಬೇರೆ ಬೇರೆ ರಾಷ್ಟ್ರಗಳ ಜೊತೆಗೆ ವ್ಯವಹಾರ ಮಾಡುವಂಥವರು, ಕಾನೂನುಗಳಿಗೆ ಎಲ್ಲೂ ರಿಜಿಸ್ಟ್ರೇಷನ್ ಇರುವುದಿಲ್ಲ. ಪುನೆಗಳ ದಾಳಿ ಮಾಡಿದರೆ ಗೊತ್ತಾಗುವುದಿಲ್ಲ. ಅವರು ಬಳಸುವಂಥ ನೌಕೆಗಳು ಕೂಡ ಗೊತ್ತಾಗುವುದಿಲ್ಲ. ಅಂಥ ಒಂದು ಮಾಫಿಯಾಜಾಲವನ್ನು ನಿರ್ಮೂಲಗೊಳಿಸುವುದಕ್ಕೆ ವಿಶೇಷವಾದಂಥ ಒಂದು ಕಾನೂನು ಬೇಕೆಂದು ರಾಷ್ಟ್ರಮಟ್ಟದಲ್ಲಿ ಆಲೋಚನೆ ಮಾಡಲಾಗಿತ್ತು. ಇಲ್ಲಿ ಏನಿದೆ, ಯಾವ ಯಾವ ಊರಿನಲ್ಲಿ ಯಾವ ಯಾವ ಪುನೆಯಲ್ಲಿ ಇಂಥವನೇ ಇಂಥ ವ್ಯಕ್ತಿ ಮಾಡುತ್ತಾನೆ ಎನ್ನುವುದು ಗೊತ್ತಿರುತ್ತದೆ. ಅವನ ಅಪ್ಪನ ಹೆಸರು, ಅವನ ಅಜ್ಜನ ಹೆಸರು, ಕುಲ ಗೋತ್ರಾ ಎಲ್ಲವೂ ಗೊತ್ತಿರುತ್ತದೆ. ಇಂಥವರನ್ನು ಹಿಡಿಯುವುದಕ್ಕೆ ಇರತಕ್ಕ ಕಾನೂನು ಸಾಲದು, ಹೊಸ ಕಾನೂನು ಬೇಕೆಂದು ಹೇಳಿದ್ದಿರಿ. ಚಾಕು ಚೂರಿ ಗೂಂಡಾ ಸಂಸ್ಕೃತಿಯಲ್ಲಾ ಕಾಂಗ್ರೆಸ್ಸಿನವರದೇ, ನಾವೆಲ್ಲ ಪಾತಾಳದಿಂದ ಬಂದಿದ್ದೇವೆ, ಇವರೆಲ್ಲಾ ಆಕಾಶದಿಂದ ಉದುರಿಬಂದಿದ್ದೇವೆಂದು ಹೇಳಿಕೊಳ್ಳುತ್ತಿದ್ದರು. ನಾವು ಗೂಂಡಾಗಳನ್ನು ಬೆಳೆಸಿದ ಹಾಗೆ, ಚಾಕು ಚೂರಿಗಳನ್ನು ಕೊಟ್ಟು ಇಟ್ಟಿದ್ದೇವೆನ್ನುವ ಹಾಗೆ, ಅದನ್ನು ನಿಯಂತ್ರಣ ಮಾಡುವುದಕ್ಕೆ, ಹೊಸದಾಗಿ ಅವತರಿಸಿದ ರೀತಿಯಲ್ಲಿ ಭಾಷಣಗಳನ್ನು ಮಾಡಿದ್ದಾರೆ. ಮಾನ್ಯ ರಾಚಯ್ಯನವರ ಭಾಷಣವನ್ನು ತಾವು ಕೇಳಿದ್ದೀರಿ. ಅದನ್ನು ಕೊಟ್ಟು ನೋಡಿ ಏನು ಮಾಡುತ್ತೀಮೆಂದು ಹೇಳಿದ್ದರು. ನಾನು ಕಳೆದ ಅಧಿವೇಶನದಲ್ಲಿ ಅವರ ಪ್ರಕಾರ ಏನು ಮಾಡಿದ್ದೀರಿ ಎಂದು ಕೇಳಿದ್ದಕ್ಕೆ, ರಾಚಯ್ಯನವರು ಉತ್ತರ ಕೊಟ್ಟರು. ಈ ಕಾನೂನು ಮೇರೆಗೆ ಒಟ್ಟು ೨೬ ಜನರನ್ನು ಬಂಧಿಸಿದ್ದೇವೆಂದು ಹೇಳಿದ್ದರು. ೨೬ ಜನರನ್ನು ಬಂಧಿಸಿ, ಅವರಲ್ಲಿ ೧೫ ಜನರನ್ನು ಸರ್ಕಾರದವರೇ ಬಿಡುಗಡೆ ಮಾಡಿದರು, ೪ ಜನರನ್ನು ಸಲಹಾಮಂಡಲಿ ಬಿಡುಗಡೆ ಮಾಡಿತು. ಕೆಲವರನ್ನು ಹೈಕೋರ್ಟ್ ಬಿಡುಗಡೆ ಮಾಡಿತು. ಡಿಟೆನ್ಷನ್‌ನಲ್ಲಿರುವವರು ಇಬ್ಬರು ಮಾತ್ರ, ಎರಡು ಜನರನ್ನು ಇಷ್ಟು ಹೊತ್ತಿಗೆ ಬಿಡುಗಡೆ ಮಾಡಿರಬಹುದು. ಎರಡು ಜನರನ್ನು ನಿಯಂತ್ರಣ ಮಾಡುವುದಕ್ಕಾಗಿ ಇಂಥ ಕಾನೂನಿನ ಅವಶ್ಯಕತೆ ಇತ್ತೆ, ಇಂಥ ದೊಡ್ಡ ಕೆಲಸ ಮಾಡಿದ್ದಕ್ಕಾಗಿ ಪರಮವೀರ ಚಕ್ರ ಪ್ರಶಸ್ತಿಯನ್ನು ಕೊಡಿ ಎಂದು ಕಳೆದ ಅಧಿವೇಶನದಲ್ಲಿಯೇ ಸೆಲಹೆ ಮಾಡಿದ್ದೆ. ೧೦೦–೨೦೦–೩೦೦ ಜನರನ್ನು ಹಿಡಿದು, ಹೈಕೋರ್ಟ್ ಬಿಡುಗಡೆ ಮಾಡಿದ್ದರೆ, ನೀವು ತರತಕ್ಕ ತಿದ್ದುಪಡಿ ಕಾನೂನನ್ನು ನಾನು ಒಪ್ಪುತ್ತಿದ್ದೆ. ಅಪರಾಧಿಗಳ ಸಂಖ್ಯೆ ೨೬, ೨೬ ಜನಕ್ಕೆ ಒಂದು ಕಾನೂನು ಬೇಕೆ ? – ಕರ್ನಾಟಕದಲ್ಲಿ ಕಳ್ಳಬಟ್ಟಿದಾರರು, ಔಷಧ ಅಪರಾಧಿಗಳು, ಜೂಜು

ಕೋರರು, ಗೂಂಡಾಗಳು. ಅನೈತಿಕ ವ್ಯವಹಾರದ ಅಪರಾಧಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಸಂಖ್ಯೆ, ನಮ್ಮ ಸರ್ಕಾರದ ತಿಳುವಳಿಕೆಗೆ ಬಂದಂತೆ ಕೇವಲ ೨ ಜನ ಇದ್ದಾರೆ. ತಾವು ೫೬ ಜನರನ್ನು ಹಿಡಿದು ಅದರಲ್ಲಿ ೨೪ ಜನ ಬೇರೆ ಬೇರೆ ಕಾರಣಕ್ಕಾಗಿ ಬಿಡುಗಡೆ ಆಗಿದ್ದಾರೆ. ಎಲ್ಲಾ ಕಾರಣವನ್ನೂ ನೀವೇ ತಿದ್ದುಪಡಿಯಿಂದ ಸಂರಕ್ಷಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಒಂದೆರಡು ವಿಚಾರಗಳನ್ನು ಹೇಳಬೇಕೆಂದರೆ, ಹೈಕೋರ್ಟಿನವರು ಯಾವುದಾದರೂ ಒಂದು ನೀವು ಹಾಕಿರತಕ್ಕ ಒಂದಲ್ಲ ಒಂದು ಕಾರಣ ಅದು ಸಮಂಜಸ ಅಲ್ಲ ಎಂದು ಅಂದಾಗ ಬೇರೆ ಕಾರಣಗಳು ಸಮಂಜಸ ಆಗಿದ್ದರೂ ಕೂಡ ಬಿಡುಗಡೆಯಾಗುವ ಸಾದರ್ಭ ಮಾತ್ರ ರಕ್ಷಣೆ ಮಾಡುತ್ತದೆ. ಅದು ಬಿಟ್ಟು ಬೇರೆ ಇನ್ನು ಏನೂ ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ, ಈ ಕಾಯಿದೆ ಯಾವ ಪುರುಷಾರ್ಥಕ್ಕೋಸ್ಕರ ಇಟ್ಟು ಕೊಂಡಿದ್ದೀರಿ ? ಈ ಕಾಯಿದೆಯನ್ನು ಇಟ್ಟುಕೊಳ್ಳುವ ಅಗತ್ಯ ಇದೆಯೇ ? ಕಾಯಿದೆಗೆ ಇನ್ನಷ್ಟು ತಿದ್ದುಪಡಿ ಮಾಡಿ ಆದರೆ ತಿದ್ದುಪಡಿ ಕಾಯಿದೆಯಿಂದ ಯಾವುದೇ ಪ್ರಯೋಜನ ಮಾಡಿಕೊಂಡಿಲ್ಲ. ಯಾವುದೇ ನಿಯಂತ್ರಣ ಮಾಡಿಲ್ಲ. ಗೂಂಡಾಗಳ ನಿಯಂತ್ರಣ ಆಯಿತೇ ? ಹಾಡು ಹಗಲಿನಲ್ಲೇ ರಸ್ತೆಯಲ್ಲಿ ಒಬ್ಬ ಗೂಂಡಾ ಇನ್ನೊಬ್ಬ ಗೂಂಡಾಗೆ ಕೈ, ಕಾಲು ಕತ್ತರಿಸುತ್ತಿದ್ದಂಥ ಸಂದರ್ಭದಲ್ಲಿ ಪೋಲೀಸರು ಚಂದ ನೋಡಿಕೊಂಡು ಸುಮ್ಮನೆ ಇದ್ದರು. ಒಂದು ಕಡೆ ಒಬ್ಬ ಗೂಂಡಾ ತಪ್ಪಿಸಿಕೊಂಡ ಎಂದು ಹೇಳಿ, ಅವನ ಹೆಂಡತಿ ಮತ್ತು ಅವನ ತಾಯಿಯನ್ನು ತೆಗೆದುಕೊಂಡು ಹೋಗಿ ದಿನಬೆಳಗಾದರೂ ಅವರಿಗೆ ಪೋಲೀಸರು ಹೊಡೆದು ಬಡಿದು ಅವನು ಎಲ್ಲಿದ್ದಾನೆ ಹೇಳು, ಅವನ ಅಡ್ರೆಸ್ ಕೊಡು ಎಂದು ಹಿಂಸೆ ಮಾಡತಕ್ಕದ್ದು. ಇನ್ನೊಂದು ಕಡೆ ಬೇರೆ ಗೂಂಡಾಗಳು ಸೇರಿ ಮತ್ತೊಬ್ಬ ಗೂಂಡಾ ಕೊಲೆ ಮಾಡಿದಾಗ ಅಧಿಕೃತ ಪೋಲೀಸ್ ಪ್ರಕಟಣೆ ಮಾಡತಕ್ಕದ್ದು ನಡೆದಿದೆ. ಗೂಂಡಾಗಳನ್ನು ಪೋಲೀಸರು ಹಿಡಿಯಲಿಕ್ಕೆ ಆಗಲಿಲ್ಲ, ಪ್ರತಿಪಕ್ಷದ ಗೂಂಡಾಗಳು ಹಿಡಿದು ಕೊಲೆ ಮಾಡಿದ್ದು ಆಯಿತು ಅಂದರೆ ನಿಮಗೆ ಯಾವ ಶಾಸನ ಕೊಟ್ಟು ಏನು ಪ್ರಯೋಜನ ? ನಾನು ಆವೊತ್ತೇ ಮಾನ್ಯ ರಾಚಯ್ಯನವರಿಗೆ ಕೇಳಿದೆ, ಹೇಡಿ ಕೈಯಲ್ಲಿ ಯಾವ ಆಯುಧ ಕೊಟ್ಟರೂ ಏನೂ ಪ್ರಯೋಜನ ಆಗುವುದಿಲ್ಲ ಎಂದು. ಆದ್ದರಿಂದ, ಬರೀ ಆಯುಧ ಚಾಪ್ತಿ ಮಾಡಿಕೊಳ್ಳುತ್ತಾ ಹೋಗಿ ಆಯುಧ ಭಾರದಿಂದ ನೀವು ತತ್ತರಿಸುತ್ತೀರಿ ಅಷ್ಟೇ ಹೊರತು ಅದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಯಾವುದೇ ಸರ್ಕಾರ ಇರಲಿ, ಬೆ ಕಾದ್ದಕ್ಕಿಂತಲೂ ಜಾಪ್ತಿ ಅಧಿಕಾರ ಇಟ್ಟುಕೊಂಡರೆ ಅದು ಅವರಿಗೆ ಅಪಾಯ. ನಾನು ವಿಧಾನ ಸೌಧಕ್ಕೆ ಬಂದು ಹೋಗುತ್ತಾ ಇರುತ್ತೇನೆ. ನಾನು ಇಲ್ಲಿ ತಿರುಗಾಡುವಂಥ ಸಂದರ್ಭದಲ್ಲಿ ಒಂದು ಕಡೆ ಚಾಕು, ಒಂದು ಕಡೆ ರಿವಲ್‌ವಾರ್, ಇನ್ನೊಂದು ಕಡೆ ದೊಣ್ಣೆ, ಕತ್ತಿ ಇಟ್ಟುಕೊಂಡು ತಿರುಗಾಡಲಿಕ್ಕೆ ಹೊರಟರೆ ಮುಂದೆ ಏನಾಗುತ್ತದೆ. ಒಂದಲ್ಲ ಒಂದು ದಿವಸ ಇದನ್ನು ಬಳಕೆ ಮಾಡಬೇಕೆಂದು ಪ್ರೇರೇಪಣೆ ಪ್ರಾರಂಭ ವಾಗುತ್ತದೆ. ಯಾವ ವ್ಯಕ್ತಿಯಾಗಲಿ, ಯಾವ ಸರ್ಕಾರ ಆಗಲಿ, ಎಷ್ಟು ಅಧಿಕಾರ ಉಪಯೋಗಿಸಲಿಕ್ಕೆ ಸಾಧ್ಯವೋ ಅಷ್ಟು ಇಟ್ಟುಕೊಳ್ಳಬೇಕು, ಅಧಿಕಾರ ಜಾಪ್ತಿ ಮಾಡಿಕೊಂಡು ಹೋಗುತ್ತಾ ಹೋಗುತ್ತಾ ತಮ್ಮ ಅಧಿಕಾರದ ಭಾರದಲ್ಲಿ, ತಾವೇ ಮುಳುಗುವಂತಾಗುತ್ತದೆ. ಇವೊತ್ತು ಗೂಂಡಾಗಳು ಎಷ್ಟು ಜನ ಇದ್ದಾರೆ, ಇದರ ಬಗ್ಗೆ ಏನಾದರೂ ಒಂದು ಸಮೀಕ್ಷೆ ಮಾಡಿದ್ದೀರಾ, ಪೊಲೀಸರ ಪಟ್ಟಿ ಇದೆಯಾ, ಸಾಧಾರಣವಾಗಿ ಇರುವಂಥ ಇಂಡಿಯನ್ ಪೀನಲ್ ಕೋಡ್ ಇನ್ನಿತರ ಕಾನೂನುಗಳ ಪ್ರಕಾರ ಕ್ರಮ ತೆಗೆದುಕೊಂಡು ನಿಯಂತ್ರಿಸುವುದಕ್ಕೆ ಸಾಧ್ಯವಾಗದೇ ಇರುವಂಥ ಸ್ವರೂಪದ ವ್ಯಕ್ತಿಗಳು ಎಷ್ಟು ಜನ ಇದ್ದಾರೆ. ಆ ಶಕ್ತಿಗಳ ಜಾಲ ಯಾವ ರೀತಿ ಇದೆ. ಅದರ ಬಗ್ಗೆ ಸಮೀಕ್ಷೆ ನಡೆದಿದೆಯೇ ? ಈಗ ಏನಾಗುತ್ತಿದೆ, ನಮ್ಮ ಸಮಸ್ಯೆಗಳು, ಸವಾಲುಗಳು ಏನು ಇವೆ, ಅದಕ್ಕೆ ಸಂಬಂಧವಿಲ್ಲದ ರೀತಿಯಲ್ಲಿ ಕಾನೂನು ತರುತ್ತಾ ಹೋದರೆ ನಾಳೆ ದಿವಸ ನಮ್ಮ ಕಾನೂನಿನೊಳಗೆ ಯಾರನ್ನೋ ಬಂಧಿಸುವುದಕ್ಕೆ ಮಾಡಿದ ರೀತಿ ಅರ್ಥ ಬರಬಹುದು. ಈಗಾಗಲೇ ಮುನಿಸಿಪಲ್ ಕಾರ್ಪೊರೇಟರ್‌ನ್ನು ಬಂಧಿಸಿದ್ದರ ಬಗ್ಗೆ ಪ್ರಸ್ತಾಪ ಈ ಮನೆಯಲ್ಲಿ ಬಂದಿತ್ತು. ಈ ಕಾನೂನಿನ ಕಳಗೆ ನಿಷ್ಕಾರಣವಾಗಿದ್ದಂಥ ೧೫೫ ಜನರನ್ನು ಏನು ಬಂಧಿಸಿದ್ದರು, ಅವರನ್ನು ಏತಕ್ಕೆ ಬಿಡುಗಡೆ ಮಾಡಿದರು. ಆ ರೀತಿ ನಿಷ್ಕಾರಣವಾಗಿದ್ದಂಥ ಜನರನ್ನು ಯಾವ ಅಧಿಕಾರಿಗಳು ಬಂಧಿಸಿದ್ದರು ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಮುಂದೆ ಆ ರೀತಿ ಆಗದಂತೆ ಏನು ಸೂಚನೆ ಕೊಟ್ಟಿದ್ದೀರಿ ? ಇವೆಲ್ಲಾ ವಿವರಣೆಗಳು ನಮಗೆ ಬೇಕು. ಸಮ್ಮನೆ ಒಂದೊಂದು ಸಾರಿ ಸದನ ಸೇರಿದಾಗಲೂ ಒಂದೊಂದು ತಿದ್ದುಪಡಿ ತರುವುದು. ಸದನ ಸೇರುವುದಕ್ಕೆ ಮುಂಚೆ ಸುಗ್ರೀವಾಜ್ಞೆ ಮಾಡುವುದು. ಇದರ ಬಗ್ಗೆ ಅಂಥ ತರಾತುರಿ ಏನಿತ್ತು ? ಯಾವ ಗೂಂಡಾ ತಪ್ಪಿಸಿಕೊಂಡು ಹೋಗುತ್ತಾನೆಂದು ಮಾಡಿದರು, ಸುಗ್ರೀವಾಜ್ಞೆ ಮಾಡುವಂಥ ಸಂದರ್ಭ ಏನು ಬಂದಿತ್ತು ? You have passed an ordinance. ಆದ್ದರಿಂದ ಯಾರಾದರೂ ಗೂಂಡಾಗಳು ಈ ಗ್ರೌಂಡ್ಸ್‌ನ ಮೇಲೆ ತಪ್ಪಿಸಿಕೊಳ್ಳುವಂತಿದ್ದರೆ. ಅವರು ತಪ್ಪಿಸಿಕೊಳ್ಳದಂತೆ ನೀವು ಮಾಡಿದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೆ. ಅವರು ಯಾರು, ಅವರ ಮೇಲಿರತಕ್ಕ ಆಪಾದನೆ ಏನು ಎಂಬುದನ್ನು ಹೇಳಿ. ಅಂಥ ತುರ್ತು ಸಂದರ್ಭ ಏನಿತ್ತು ? ಸರ್ಕಾರ ಈ ಸದನವನ್ನು ಒಂದು

ರೀತಿಯು ಸಾಂಪ್ರದಾಯಿಕವಾಗಿ ನಡೆಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ನಿಮಗೆ ಕಾನೂನು ಪ್ರಕಾರ ಅಧಿಕಾರ ಕೊಡುವುದರಲ್ಲಿ ನಮ್ಮ ಅಭ್ಯಂತರವಿಲ್ಲ. ಸಮಾಜವನ್ನು ರಚನೆ ಮಾಡುವ ದೃಷ್ಟಿಯಿಂದ, ಒಳ್ಳೆಯವರನ್ನು ರಕ್ಷಣೆ ಮಾಡುವ ದೃಷ್ಟಿಯಿಂದ, ಕೆಟ್ಟವರನ್ನು ಶಿಕ್ಷೆ ಮಾಡುವ ದೃಷ್ಟಿಯಿಂದ ನಿಮಗೆ ಅಧಿಕಾರವನ್ನು ಕೊಡುವುದಕ್ಕೆ ನಾವು ಹಿಂಜರಿಯುವುದಿಲ್ಲ. ಆದರೆ ಅಧಿಕಾರವನ್ನು ನಡೆಸುವುದ ಕ್ಕೋಸ್ಕರವೇ ನಮಗೆ ಅಧಿಕಾರವನ್ನು ಕೊಡಬೇಕೆಂದು ನೀವು ಕೇಳುವುದಾದರೆ ಅದಕ್ಕೆ ನಾವು ಸಿದ್ಧರಿಲ್ಲ. ಅಲ್ಲದೆ ನೀವು ಕೇಳುವುದರಲ್ಲಿ ಕೂಡ ಅರ್ಥವಿರುವುದಿಲ್ಲ. ಹಿಂದೆ ಕೆಲವರು ಹೇಳುತ್ತಿದ್ದರು, ಕಾಂಗ್ರೆಸ್ ನವರ ಕಡೆಯೇ ಎಲ್ಲ ಗೂಂಡಾಗಳೂ ಇದ್ದಾರೆ ಎಂದು. ಹಾಗಾದರೆ ಈಗ ನಿಮ್ಮ ಕಡೆ ಆವರು ಇದ್ದಾರೆಯೆ ? ಬಹುಶಃ ನೀವು ಗೂಂಡಾಗಳನ್ನು ರಾಷ್ಟ್ರೀಕರಣ ಮಾಡಿಕೊಂಡಿರಬೇಕೆಂದು ಕಾಣಿಸುತ್ತದೆ.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—೨೫ರಲ್ಲಿ ೧೫ ಜನರನ್ನು ಬಿಟ್ಟಿದ್ದಾರೆ. ಆವರು ಏನು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ ಆದರ ಪ್ರಕಾರ ನೋಡುವುದಾದರೆ ಉಳಿದ ೧೦ ರಲ್ಲಿ.....

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ದೇರ್ ವಿಲ್ ಬಿ ಮೋರ್ ಸೇಫ್ಟಿ ಎಂದು ಅವರೆಲ್ಲಾ ನಿಮ್ಮ ಕಡೆಯೇ ಇರಲಿ ಎಂದು ನಿಮ್ಮ ಕಡಗೇ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದಕ್ಕೆ ರೀಸನ್ ಕೊಡಿ.

ಅಧ್ಯಕ್ಷರು.—ನೀವು ಆವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಕೆ. ಜೆಚ್. ಶ್ರೀನಿವಾಸ್.—ಈ ಗೂಂಡಾಗಳೆಲ್ಲಾ ಎಲ್ಲಿ ಹೋದರು ? ಇದ್ದದ್ದೇ ಇಬ್ಬರು ಗೂಂಡಾಗಳೇನು ? ಈಗ ಎಷ್ಟು ಜನ ಒಳಗಡೆ ಇದ್ದಾರೆ ? ಕಾನೂನು ಪ್ರಕಾರ ಎಷ್ಟು ಜನರನ್ನು ನೀವು ಒಳಗಡೆ ಹಾಕಿದ್ದೀರಿ ? ನೀವು ಈ ಒಂದು ಶಾಸನವನ್ನು ತರದಿದ್ದರೆ ಆವರನ್ನು ಬಿಡುಗಡೆ ಮಾಡಿದಾಗ ಆವರಿಂದ ಸಮಾಜಕ್ಕೆ ದೊಡ್ಡ ಅನಾಹುತವಾಗುತ್ತದೆಂದು ತಾವು ಹೇಳುವುದಾದರೆ ಆಗ ನೀವು ಏನು ಬೇಕೋ ಆದನ್ನು ಮಾಡಿಕೊಳ್ಳಿ ಎಂದು ನಾವು ಹೇಳಬಹುದು. ಆಂಥಾದ್ದು ಏನೂ ಇಲ್ಲ. ಯಾವ ಅಂಕಿಅಂಶವೂ ಇಲ್ಲ, ಯಾವ ಉದ್ದೇಶಕ್ಕೆ ಎಂಬುದೂ ಇಲ್ಲ. ಆಂದಹಾಗೆ ನೀವು ಯಾವುದೋ ಒಂದು ಉದ್ದೇಶವನ್ನು ಹೇಳಿದರೆ ಅದು ಪ್ರಯೋಜನವಾಗುವುದಿಲ್ಲ. ನಿಮಗೆ ಅಧಿಕಾರ ಏತಕ್ಕೆ ಬೇಕು ? ಕಾನೂನು ಏತಕ್ಕೆ ಬೇಕು ? ಇದುವರೆಗೆ ಎಷ್ಟು ಜನ ಗೂಂಡಾಗಳನ್ನು ಪ್ರತಿಬಂಧಕ ಮಾಡ ಬೇಕೆಂದು ನಿಮ್ಮ ಇಲಾಖೆಯವರು ಶಿಫಾರಸು ಮಾಡಿದ್ದಾರೆ ? ನಮ್ಮದು ಬದಲಾವಣೆಯಾಗುತ್ತಿರತಕ್ಕ ಸಮಾಜ. ಹಲವಾರು ಸಮಸ್ಯೆಗಳನ್ನು ಈ ಸಮಾಜ ಎದುರಿಸುತ್ತಿದೆ. ಇದರ ಬಗ್ಗೆ ನನಗೂ ಕೂಡ ಪ್ರಜ್ಞೆ ಇದೆ. ಮೇಲುಗಡೆ ತೋರಿಕೆಯ ಒಂದು ಸಮಾಜವೇನಿದೆ ಇದಕ್ಕೆ ಅಂತರ್ಗವಾಗಿ ಇನ್ನೊಂದು ಸಮಾಜ ಇದೆ. ಯಾವುದೇ ನೀತಿ ಪಾಲನೆಯನ್ನೂ ಮಾಡದಿರತಕ್ಕ ಸಮಾಜ ಸುಸಂಘಟಿತವಾಗಿ ನಮಗೆ ಸವಾಲಾಗಿ ಪರಿಣಮಿಸಿದೆ. ಬೇರೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಒಂದೇ ಹಿಸ್ಸೆ ಮಾಡಿದ್ದಾರೆ. ಯಾವುದಾದರೂ ಪಾಶ್ಚಿಮಾತ್ಯ ದೇಶಗಳಿಗೆ ಹೋದರೆ ಅಲ್ಲಿ ಗೂಂಡಾಗಳು, ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಎಲ್ಲಿರುತ್ತಾರೆ ಆ ಜಾಗಕ್ಕೆ ಹೋದರೆ ಅಪಾಯ ಇದೆ, ಆಂಥ ಜಾಗಕ್ಕೆ ಹೋಗಬೇಡಿ ಎಂದು ಮೊದಲೇ ಹೇಳುತ್ತಾರೆ. ಆದರೆ ನಮ್ಮ ದೇಶದಲ್ಲಿ ಇದು ಯಾವುದೂ ಇಲ್ಲ. ಯಾವ ದಾರಿಯಲ್ಲಿ ಹೋದರೆ ಏನು ಅಪಾಯ ಬರುತ್ತದೆಂದು ಹೇಳುವುದಕ್ಕೆ ಆಗದ ರೀತಿಯಲ್ಲಿ ಸಮಾನಾಂತರವಾಗಿ ಸುಸಂಘಟಿತವಾದ ರೀತಿಯಲ್ಲಿ ನಮ್ಮ ಕಟ್ಟುಪಾಡು, ನಮ್ಮ ಕಾನೂನಿಗೆ ಬೆಲೆ ಕೊಡದ ರೀತಿಯಲ್ಲಿ ದುಷ್ಟ ಶಕ್ತಿಗಳು ತಾಂಡವ ವಾಡುತ್ತಿವೆ. ಅವು ಸಮಾಜ ಕಂಟಕ ಪ್ರವೃತ್ತಿ ಹೊಂದಿವೆ. ಈ ರೀತಿ ಎರಡು ವಿಧದ ಜನರ ಪ್ರಭಾವದಿಂದಾಗಿ ಬಾರ್ಡರ್‌ನಲ್ಲಿರತಕ್ಕ ಜನರು ಸ್ವಲ್ಪಮಟ್ಟಿಗೆ ಪರಿವರ್ತನೆ ಆಗತಕ್ಕದ್ದು, ಇನ್ನು ಕೆಲವರು ಅಲ್ಲೂ ಹೋಗಿ, ಇಲ್ಲೂ ಬರತಕ್ಕವ್ದು ಇದೆ. ಇವರು ಯಾವರೀತಿ ಆಗುತ್ತಾರೆಂದು ನನಗನಿಸುತ್ತದೆ. ಇವರೂ ಕೂಡ ನಮ್ಮ ಸಮಾಜದ ಬಗ್ಗೆ ಯಾವುದೋ ಒಂದು ಸಂಬಂಧವನ್ನು ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದಾರೆ, ಅವರನ್ನು ಹಿಡಿಯುವುದಕ್ಕೆ ಹೊರಟಾಗ ಅವರನ್ನು ಹಿಡಿಯದಂತೆ ತಪ್ಪಿಸಲು ಇನ್ನೊಂದು ಶಕ್ತಿ ಅಥವಾ ಇನ್ನೊಬ್ಬರು ನಮ್ಮ ಕಡೆ ಇರುತ್ತಾರೆ. ಪೋಲೀಸ್ ಇಲಾಖೆಯಲ್ಲದಿದ್ದರೂ ಕೂಡ ಇಂಥ ಕೆಲಸವನ್ನು ಮಾಡುವವರು ಒಂದಲ್ಲೊಂದು ರೀತಿಯಲ್ಲಿ ಸಂಬಂಧವನ್ನು ಇಟ್ಟುಕೊಂಡು ತಪ್ಪಿಸಿಕೊಳ್ಳುವ ಕೆಲಸ ಮಾಡುತ್ತಾರೆ. ಅವರನ್ನು ತಹಬಂದಿಗೆ ತರಬೇಕೆನ್ನುವುದಾದರೆ ಸುಸಂಬದ್ಧವಾದ ಕಾನೂನು ತರಬೇಕು. ಇದಕ್ಕೂ ಮುಂಚಿತವಾಗಿ ನಮ್ಮ ಮುಂದಿರತಕ್ಕ ಸವಾಲು ಏನೆಂಬುದನ್ನು ನೀವು ಗುರ್ತಿಸಿಕೊಳ್ಳಬೇಕಿದ್ದರೆ ನಿಮ್ಮ ಕೈಗೆ ನಾವು ಕಾನೂನು

ಕೊಟ್ಟರೆ ಹೇಗೆ? ಏನು ಯಾವರೀತಿ ವ್ಯವಹಾರ ಮಾಡುತ್ತಾರೆ ಎಂಬ ನಿರ್ದಿಷ್ಟ ಕಲ್ಪನೆ ಸರ್ಕಾರಕ್ಕೆ ಇಲ್ಲದೆ ಕೇವಲ ನಮಗೆ ಅಧಿಕಾರ ಕೊಡಿ ಎಂದು ಕೇಳಿದರೆ ನಾವು ಏತಕ್ಕೆ ಕೊಡಬೇಕು? ನಿಮ್ಮ ಅಂಕ ಸಂಖ್ಯೆಗಳನ್ನು ನೋಡಿದರೆ ತುಂಬಾ ಹಾಸ್ಯಾಸ್ಪದವಾಗಿದೆ. ಇಷ್ಟು ದೊಡ್ಡ ಕಾನೂನು ಮಾಡಿ ಇಡೀ ರಾಜ್ಯದಲ್ಲಿ ೨೬ ಜನರನ್ನು ಬಂಧಿಸಿ ಅದರಲ್ಲಿ ೧೫ ಜನರನ್ನು ಸರ್ಕಾರದವರೇ ಬಿಡುಗಡೆ ಮಾಡಿ ೪ ಜನರನ್ನು ಸಲಹಾ ಮಂಡಲಿ ಬಿಡುಗಡೆ ಮಾಡಿ ಉಳಿದವರನ್ನು ಹೈ ಕೋರ್ಟ್ ಬಿಡುಗಡೆ ಮಾಡಿ ಉಳಿದ ಇಬ್ಬರನ್ನು ಮಾತ್ರ ಕಾನೂನು ಬದ್ಧತೆಯಲ್ಲಿಡಲಾಗಿದೆ ಎಂದು ಹೇಳಿ.ವುದಾದರೆ ಇದಕ್ಕೆ ಕಾನೂನು ಏತಕ್ಕೆ ಬೇಕು? ಸುಮ್ಮನೆ ಗೂಂಡಾಗಳನ್ನು ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆಂದು ತಾವೂ ಬಂದಮೇಲೆ ಚಾಕು ಚೂರಿ ಯಾವುದೂ ಮಾರ್ಕೆಟ್‌ನಲ್ಲಿ ಸಿಗುವುದಿಲ್ಲವೆಂದು ಹೇಳಿಬಿಟ್ಟರಿ. ಈಗ ನೋಡಿದರೆ ಬೆಂಗಳೂರಿನಲ್ಲಿ ನಡೆದಂಥ ಘಟನೆಗಳನ್ನು ಯಾವುದನ್ನು ಪತ್ತೆಹಚ್ಚಲಿಲ್ಲ. ಒಬ್ಬ ಗೂಂಡ ರಸ್ತೆಯಲ್ಲಿ ಇನ್ನೊಬ್ಬ ಗೂಂಡನ ರಸ್ತೆಯಲ್ಲಿ ಹಾಡು ಹಗಲಲ್ಲೇ ಕಾಲು ಕವಿ ಛಿದ್ರ ಛಿದ್ರ ಮಾಡುತ್ತಿದ್ದರೂ ಪೋಲೀಸ್‌ನವರು ಅಕ್ಕಪಕ್ಕದವರು ನೋಡುತ್ತಲೇ ಇರುತ್ತಾರೆ. ಕಾನೂನು ಇದೆ, ಕಾನೂನನ್ನು ತೆಗೆದುಕೊಂಡು ಏನು ಮಾಡುತ್ತೀರಿ. ಕಾನೂನು ಇರುವುದು ಉಪ್ಪಿನಕಾಯಿ ಇದ್ದಂತೆ ರುಚಿ ನೋಡುವುದಕ್ಕೆ, ಯಾವ ಯಾವ ಗೂಂಡಗಳನ್ನು ಹಿಡಿದಿದ್ದೀರಿ. ಗೂಂಡಾಗಳು ಅವರವರೇ ಹೊಡೆದಾಡಿಕೊಂಡು ಆಕ್ಸಿಡೇಟ್ ಆಗಿದ್ದಾರೆಯೇ ಹೊರತು ನಿಮ್ಮ ಟೆಕ್ನಿಕಲ್ ಏನೂ ಇಲ್ಲ. ಪೋಲೀಸ್‌ನವರು ಗೂಂಡಾಗಳ ಮೇಲೆ ಗೂಂಡಾಗಳನ್ನು ಬಿಟ್ಟು ಅವರವರೇ ಹೊಡೆದಾಡಿಕೊಂಡು ಸಾಯುಮಂತೆ ಮಾಡಿ ಪೋಲೀಸ್‌ನವರು ಪ್ರಕರಣಗಳನ್ನು ಪಟ್ಟಿ ಮಾಡುತ್ತಿರುವಂತಹ ಒಂದುರೀತಿಯಾದ ಕಾರ್ಯಕ್ರಮ ಎಂದು ಅರ್ಥ ಮಾಡಿಕೊಳ್ಳ ಬೇಕಾಗಿದೆ. ಇದುವರೆಗೆ ಗೂಂಡಾಗಿರಿಯನ್ನು ನಿಯಂತ್ರಣ ಮಾಡಿದಂಥ ಪ್ರಕರಣ ಒಂದೂ ಕಂಡು ಬಂದಿಲ್ಲ. ಈ ವಿಚಾರದಲ್ಲಿ ಸರ್ಕಾರ ನಿಯಂತ್ರಣ ಮಾಡುವುದನಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಈಪತ್ತಿನದಿವಸ ಪಟ್ಟಣ ಪ್ರದೇಶಗಳಲ್ಲಿ ಒಂದು ಗಂಭೀರವಾದ ಪರಿಸ್ಥಿತಿ ಉಂಟಾಗಿದೆ. ೫-೬ ಗಂಟೆಗಳಾದರೆ ಯಾರು ರಸ್ತೆಯಲ್ಲಿ ಓಡಾಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಅಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ತರ್ತು ಪರಿಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ತರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಸೆಕೆಂಡ್‌ಷೋ ಸಿನಿಮಾ ನೋಡಿಕೊಂಡು ಒಬ್ಬೊಬ್ಬರೇ ಬರುತ್ತಿದ್ದರು. ಈಪತ್ತಿನದಿವಸ ಆರೀತಿ ಪರಿಸ್ಥಿತಿ ಇಲ್ಲ. ಮ್ಯಾಟ್ನಿ ಷೋ ಕ್ಯಾನ್ಸಲ್ ಮಾಡತಕ್ಕಂಥ ಪರಿಸ್ಥಿತಿ ಬಂದಿರುತ್ತದೆ. ಈಮತ್ತು ಪ್ರಶ್ನೆ ಏನಿದೆ ಎಂದರೆ ಕಾನೂನು ತೆಗೆದುಕೊಂಡ ಮೇಲೆ ಆ ಕಾನೂನು ಒಂದಲ್ಲ ಒಂದು ರೀತಿಯಲ್ಲಿ ಸಾರ್ಥಕ ವಾಗಬೇಕೇಹೊರತು ಸ್ವಾತಂತ್ರ್ಯ ಅಪಹರಣವಾಗಬಾರದು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕಾನೂನುಭಯದಿಂದ ಇಡೀ ಸಮಾಜ ನೆಮ್ಮದಿಯಿಂದಿತ್ತು. ಆ ಕೆಲಸ ಇಂದು ಮಾಡುತ್ತಿಲ್ಲ ಈತನ ಮಧ್ಯೆ ಪಾಪ ಪರದೇಶಿಗಳಿಗೆ ಸಂಕಟ ಕೊಡತಕ್ಕಂಥದ್ದಕ್ಕೆ ಕಾನೂನು ಬಳಕೆ ಮಾಡುವುದರಿಂದ ಯಾವ ಸಾರ್ಥಕವೂ ಆಗುವುದಿಲ್ಲ. ರಾಜ್ಯಾದ್ಯಂತ ಈಪತ್ತಿನದಿವಸ ದರೋಡೆ ಪ್ರಕರಣಗಳು ನಡೆಯುತ್ತಲೇ ಇರುತ್ತದೆ. ಹೊಸ ವರ್ಷಕೂಡ ಇದೇ ಸದನದಲ್ಲಿ ಚರ್ಚೆ ನಡೆಯಿತು. ಇನ್ನೊಂದು ವಾರದಲ್ಲಿ ಪತ್ತೆ ಮಾಡುತ್ತೇವೆಂದು ಹೇಳಿಬಿಟ್ಟರು. ಕಳೆದ ೧೫-೨೦ ದಿವಸಗಳಿಂದಲೂ ಈ ರೀತಿಯಾದ ದರೋಡೆ ಪ್ರಕರಣಗಳು ಬೇರೆ ಬೇರೆ ಕಡೆಯಲ್ಲಿ ಆಗಿರುತ್ತದೆ. ಇದುವರೆವಿಗೂ ನಿರ್ದಿಷ್ಟವಾಗಿ ಯಾವ ಪ್ರಕರಣವನ್ನೂ ಕಂಡು ಹಿಡಿಯಲಿಲ್ಲ. ಈ ಪ್ರಕರಣದ ಹಿಂದೆ ಇರತಕ್ಕಂಥ ಶಕ್ತಿಗಳು ಯಾರು ಎಂಬುದರ ಬಗ್ಗೆ ವಿವರವಾಗಿ ಪತ್ತೆ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ಕಾನೂನುಗಳ ಸಂಖ್ಯೆಯನ್ನು ಜಾಸ್ತಿಮಾಡಿ, ಕಾನೂನುಗಳಿಗೆ ತಿದ್ದುಪಡಿಗಳನ್ನು ತಂದು ಸಾಧನೆ ಮಾಡುತ್ತೇವೆಂದು ಸರ್ಕಾರ ಭ್ರಮೆ ಪಟ್ಟುಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ನೀವು ಆಡಳಿತಾತ್ಮಕವಾಪ ಬಿಗಿಯನ್ನು ಈ ಪರೆಗೆ ತೋರಿಸಿಲ್ಲ. ಸಂಪೂರ್ಣವಾಗಿ ಈ ರಂಗದಲ್ಲಿ ವಿಫಲರಾಗಿದ್ದೀರಿ. ಪೋಲೀಸರಿಗೆ ದಕ್ಷತೆ ಇಲ್ಲ, ಯೋಗ್ಯತೆ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಸಾಕಷ್ಟು ಜನ ದಕ್ಷರು, ಯೋಗ್ಯರು ಇದ್ದಾರೆ. ಆದರೆ ಆ ಅಲಾಖೆಗೆ ಸರಿಯಾದ ರೀತಿಯಲ್ಲಿ ಲಗಾಮು ಹಾಕಿ ಉಪಯೋಗಿಸತಕ್ಕ ಶಕ್ತಿ ಸಾಮರ್ಥ್ಯವನ್ನು ಈ ಸರ್ಕಾರ ಪ್ರದರ್ಶನ ಮಾಡಿಲ್ಲ. ರಾಜಕಯ್ಯನವರು ಎದುರಿಗೆ ಇದ್ದರೆ ಅವರಿಗೆ ಹೇಳುವುದು ಕಷ್ಟ. ತಾನು ಸರಿಯಾದ ಮನುಷ್ಯ ಎಂಬುದರ ಕಡೆಗೆ ಯೋಚಿಸುತ್ತಾರೆಯೇ ಹೊರತು ಇಲಾಖೆ ಹೇಗಿದೆ ಎಂಬುದನ್ನು ಯೋಚಿಸುವುದಿಲ್ಲ. ರಾಜಕಯ್ಯನವರು ಸರಿಯಾದ ಮನುಷ್ಯರಲ್ಲ, ಅವರು ಅಂಥವರು, ಇಂಥವರು ಎಂದೂ ನಾವು ಹೇಳಿಲ್ಲ. ಆದರ ಬಗ್ಗೆ ಅಲ್ಲ ಇಲ್ಲಿರುವ ಪ್ರಶ್ನೆ. ಯಾವುದೇ ರೀತಿಯಲ್ಲಿ ಹೇಳಿದರೂ ತಾನು ಸರಿಯಾದ ಮನುಷ್ಯನಲ್ಲವೇ ಎಂದು ಸವಾಲು ಇಡುತ್ತಾರೆ. ನಮಗೆ ಬೇಕಾಗಿರತಕ್ಕದ್ದು ದಕ್ಷತೆಯಿಂದ ಸರ್ಕಾರ ನಡೆಯಬೇಕು. ಸರ್ಕಾರ ಎಂಬುದು ಒಂದು ಶಕ್ತಿ. ಅದು ಯಾರಿಗೂ ಮಣಿಯತಕ್ಕ ಶಕ್ತಿ ಅಲ್ಲ. ಅದು ಮನಸ್ಸು ಮಾಡಿದರೆ ಇಂಥ ಚಟುವಟಿಕೆಗಳನ್ನು ನಿಮಿಷಾರ್ಧದಲ್ಲಿ ಪತ್ತೆಹಚ್ಚತಕ್ಕ ಶಕ್ತಿ ಇದೆ. ಯಾರೂ ಸರ್ಕಾರದ ದುರ್ಲಾಭ ಪಡೆದುಕೊಳ್ಳ

ಬಾರದು, ಯಾರೂ ಕದಿಯುವುದಕ್ಕೆ ಹೋಗಬಾರದು ಎಂಬ ಭಾವನೆ ಜನತೆಗೆ ಬರುವಂತೆ ಸರ್ಕಾರವನ್ನು ನಡೆಸದಿದ್ದರೆ ಈ ಕಾನೂನಿನಿಂದ ಏನೂ ಪ್ರಯೋಜನವಿಲ್ಲ. ಸುಮ್ಮನೆ ಪೇಪರ್ ವರ್ಕ್ ಜಾಸ್ತಿಯಾಗುತ್ತದೆ. ಲಾ ಡಿಪಾರ್ಟ್‌ಮೆಂಟಿನವರು ಇದಕ್ಕೆ ಒಂದು ಅಮೆಂಡ್‌ಮೆಂಟ್ ಹೇಳುತ್ತಾರೆ. ಕಾನೂನು ಪಂಡಿತರು ಚಾಪೆ ಕೆಳಗೆ ನುಸಿಳಿದರೆ ಅವರು ರಂಗೋಲೆ ಕೆಳಗೆ ನುಸಿಯುತ್ತಾರೆ. ಇದರ ಲೂಪ್‌ಹೋಲ್‌ಗಳನ್ನು ಅವರು ಕಂಡಿರುತ್ತಾರೆ. ಯಾವುದೋ ಶುಲ್ಕ ಬಳಸಿರುತ್ತಾರೆ. ಅದರಲ್ಲಿ ಅವರು ದೌರ್ಬಲ್ಯವನ್ನು ಪತ್ತೆ ಮಾಡಿಕೊಂಡಿರುತ್ತಾರೆ. ಸರ್ಕಾರಕ್ಕೆ ಏನು ಕಾನೂನು ಸಲಹೆ ದೊರೆಯುತ್ತದೆ ಅದಕ್ಕಿಂತ ಉತ್ತಮವಾದ ಸಲಹೆ ಗೂಂಡಾಗಳಿಗೆ ಇದೆ. They command a better and more competent legal opinion then they legal opinion that the Government has got. This is a very unfortunate situtation in this country. ನೀವು ಮತ್ತೆ ಮುಂದಿನ ಅಧಿವೇಶನದಲ್ಲಿ ಇನ್ನೊಂದು ತಿದ್ದುಪಡಿಯನ್ನು ತರುತ್ತೀರಿ. ಈ ತಿದ್ದುಪಡಿಗಳ ಸರಮಾಲೆಯಿಂದ ಯಾವ ಸಾರ್ಥಕತೆಯೂ ಇಲ್ಲ. ನಿಜವಾಗಿ ಗೂಂಡಾಗಳನ್ನು ನಿಯಂತ್ರಿಸಬೇಕೆಂದರೆ ಮುಕ್ತವಾಗಿ ಗಂಭೀರವಾಗಿ ಚರ್ಚೆ ಏರ್ಪಡಿಸಿ, ಯಾರ್ಯಾರಿದ್ದಾರೆ, ಯಾವ್ಯಾವ ಶಕ್ತಿಗಳಿವೆ, ಯಾವ ರೀತಿ ಗೂಂಡಾಗಿರಿ ನಡೆಯುತ್ತಿದೆ, ಕಳ್ಳಬಟ್ಟಿ ಹಿಂದೆ ಇರತಕ್ಕ ಶಕ್ತಿಗಳು ಯಾವುವು, ಜೂಜುಗಾರರ ಹಿಂದೆ ಇರತಕ್ಕ ಶಕ್ತಿ ಯಾವುದು, ಸ್ಮಗ್ಲಿಂಗಳ ಹಿಂದಿರತಕ್ಕ ಶಕ್ತಿ ಯಾವುದು ಎಂಬುದನ್ನು ವೈಜ್ಞಾನಿಕವಾಗಿ ವಿಶ್ಲೇಷಣೆಗೆ ಒಳಪಡಿಸಿ ನಿಜವಾಗಿ ಅಂಥ ಶಕ್ತಿಗಳನ್ನು ಹತ್ತಿಕ್ಕುವುದಕ್ಕೆ ಪ್ರತ್ಯೇಕ ಕಾನೂನಿನ ಅವಶ್ಯಕತೆ ಇದ್ದರೆ ತರೋಣ. ಇದನ್ನೆಲ್ಲ ಇಟ್ಟುಕೊಂಡು ಈ ಕಾನೂನಿಂದ ಸಾರ್ಥಕತೆ ಸಿಗುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಸವಾಲು ಗಂಭೀರವಾಗಿದೆ, ಅದನ್ನು ಎದುರಿಸುವುದಕ್ಕೆ ಸಾಮರ್ಥ್ಯ ಬೇಕು. ಅಧಿಕಾರಿಗಳು ಇದ್ದಾರೆ, ಕಾನೂನು ಇದೆ, ಅಧಿಕಾರಿಗಳ ಕೈಗೆ ಕಾನೂನು ಕೊಟ್ಟಿದ್ದೇವೆಂಬ ಭಾವನೆಯಿಂದ ಪ್ರಯೋಜನವಾಗುವುದಿಲ್ಲವೆಂದು ಹೇಳಿ, ಈ ಕಾರಣಗಳಿಂದ ಈ ತಿದ್ದುಪಡಿಯಿಂದ ಯಾವ ಸಾರ್ಥಕತೆಯೂ ಆಗುವುದಿಲ್ಲವೆಂದು ಹೇಳಿ, ವಿಧೇಯಕವನ್ನು ತೀವ್ರವಾಗಿ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಮಾನ್ಯ ಅಧ್ಯಕ್ಷರೆ, ಇವತ್ತು ಈ ಸಭೆಯ ಮುಂದೆ ಮಂಡಿಸಿರತಕ್ಕ ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸುತ್ತೇನೆ. ಕಾರಣವಿಷ್ಟೆ. ಹೋದ ಸಾರಿ ರಾಚಯ್ಯನವರು ಇದನ್ನು ಮಂಡಿಸಿದಾಗ ಶ್ರೀನಿವಾಸ್‌ರವರು ಹೇಳಿದ ಹಾಗೆ ಹೇಳಿದ್ದೆವು. ಈ ಕಾನೂನಿನ ಅವಶ್ಯಕತೆ ಇಲ್ಲ. ಈಗಿರತಕ್ಕ ಕಾನೂನುಗಳು ಏನಿವೆ ಅವುಗಳ ವ್ಯಾಪ್ತಿಯಲ್ಲಿ ನಾವು ಇವರೆಲ್ಲರನ್ನು ಸದೆಬಡಿಯಬಹುದು, ಶಿಕ್ಷೆ ಕೊಡಬಹುದು. ಅದಕ್ಕೆ ಪುನಃ The Karnataka Prevention of Dangerous Activities of Bootleggers, Drug Offenders, Gamblers, Goondas, Immoral Traffic Offenders and Slum Grabbers ಅವಶ್ಯಕತೆ ಇಲ್ಲವೆಂದು ಇಡೀ ಸದನದ ಸದಸ್ಯರು ಆ ದಿವಸ ವಿರೋಧ ಮಾಡಿದೆವು. ಆದರೂ ಅವರು ಒಪ್ಪಲಿಲ್ಲ. ಇರತಕ್ಕ ಕಾನೂನಿನಲ್ಲಿ ಗೂಂಡಾಗಳಿಗೆ ಶಿಕ್ಷೆ ಕೊಡಲಿಕ್ಕೆ ಆಗುವುದಿಲ್ಲ, ಅವರು ತಪ್ಪಿಸಿಕೊಳ್ಳುತ್ತಿದ್ದಾರೆ. ಅವರನ್ನು ಶಿಕ್ಷೆಗೆ ಗುರಿಪಡಿಸಬೇಕಾದರೆ ಈ ಕಾನೂನನ್ನು ಒಪ್ಪಬೇಕೆಂದು ಅಂದು ಹೇಳಿದರು. ಆ ಕಾನೂನನ್ನು ನಾವು ಪಾಸ್ ಮಾಡಿಕೊಟ್ಟಮೇಲೆ, ಆ ಕಾನೂನು ಅವರ ಕೈಗೆ ಸಿಕ್ಕಿದ ಮೇಲೆ ಇಲ್ಲಿಯವರೆಗೆ ಯಾವ ಕ್ರಮವನ್ನೂ ಅವರು ಗೂಂಡಾಗಳ ಮೇಲೆ ತೆಗೆದುಕೊಂಡಿಲ್ಲ. ಮತ್ತು ಈಗಿರತಕ್ಕ ಗೂಂಡಾಗಳ ಸಂಖ್ಯೆ ದಿನೇದಿನೇ ಬೆಳೆಯುತ್ತಿದೆ. ಅವರನ್ನು ಸದೆಬಡಿಯತಕ್ಕ ಕೆಲಸ ಇಲ್ಲಿಯವರೆಗೂ ಮಾಡಿಲ್ಲ. ಅವರೇ ಕೊಟ್ಟ ಅಂಕಿಸಂಖ್ಯೆ ಪ್ರಕಾರ ೨೪ ಜನರಲ್ಲಿ ೧೫ ಜನರನ್ನು ಸರ್ಕಾರದವರೇ ರಿಲೀಸ್ ಮಾಡಿದ್ದಾರೆ. ಅಂದರೆ ನೀವು ಒಳ್ಳೆಯವರು, ಗೂಂಡಾಗಳಲ್ಲ, ಮನೆಗೆ ಹೋಗಿ ಎಂದು ಬಿಡುಗಡೆ ಮಾಡಿದ್ದಾರೆ. ಇನ್ನು ೪ ಜನರಿಗೆ ಅಡ್ವೈಸರಿ ಬೋರ್ಡ್‌ನವರು ರಿಲೀಸ್ ಮಾಡಿದ್ದಾರೆ. ಉಳಿದ ಇಬ್ಬರು ಹೈಕೋರ್ಟಿನಿಂದ ಬಿಡುಗಡೆ ಆಗಿದ್ದಾರೆ. ಈ ಸದನದಲ್ಲಿ ೨೨೫ ಸದಸ್ಯರು ಸೇರಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಈ ಬಿಲ್ ಮಾಡಿದ್ದರ ಪ್ರಯೋಜನ ಏನಾಯಿತು ಎಂದರೆ ಇಬ್ಬರಿಗೆ ಮಾತ್ರ ಡೀಟೈನ್ ಮಾಡುವುದಕ್ಕೆ ತಂದಂತಾಯಿತು. ಅವರೂ ಕೂಡ ಈಗ ಇದ್ದಾರೋ ಇಲ್ಲಪ್ಪೊ. ಏಕೆಂದರೆ ಆಗಿನ ಉತ್ತರ ಇದು. ಕೇವಲ ಇಬ್ಬರಿಗೋಸ್ಕರವಾಗಿ ಇಂಥ ಒಂದು ಕಾನೂನನ್ನು ತಂದು ಬಡರೈತರ ಲಕ್ಷಾಂತರ ರೂಪಾಯಿಗಳನ್ನು ಹಾಳು ಮಾಡಿದ್ದಾರೆ. ಇಂಡಿಯನ್ ಪೀನಲ್ ಕೋಡ್‌ನಲ್ಲೇ ಕ್ರಮ ತೆಗೆದುಕೊಳ್ಳುವುದಕ್ಕೆ

---

†ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅವಕಾಶ ಇದೆ. ಪೋಲೀಸ್ ಆಕ್ಟ್ ಕೆಳಗೇ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆ. ಬೇರೆ ಬೇರೆ ಕಾನೂನು ಕೂಡ ಇದೆ. ಆದರ ಪ್ರಕಾರ ಹಿಡಿತದಲ್ಲಿಟ್ಟುಕೊಂಡು ಸದೆಬಡಿಯತಕ್ಕ ಕೆಲಸ ಮಾಡುವುದು ಬಿಟ್ಟು ಹೊಸ ಕಾನೂನು ಏನು ತಂದಿದ್ದೀರಿ, ಆದರಿಂದ ಪ್ರಯೋಜನವೂ ಆಗುತ್ತಿಲ್ಲ, ಇದರ ಆಬ್ಜೆಕ್ಟ್ಸ್ ಮತ್ತು ರೀಸನ್ಸ್‌ನಲ್ಲಿ ಏನು ಹೇಳಿದ್ದಾರೆಂದರೆ :

> "The State Government has experienced some procedural difficulty to sustain the detention orders in certain cases which were challenged before the High Court on technical grounds such as error in the date or the number of the case or defect in specifying the stage of the case concerning the detenu in the grounds or for the reason that one of the grounds of detention has been found somewhat defective, even though the other grounds are found to be valid and sufficient to uphold the detention order.
>
> In order to cure the technical lacuna, the Prevention of Dangerous activities of bootleggers, Drug-Offenders, Gamblers, Goondas, Immoral Traffic Offenders and Slum-Grabbers (Amendment) Ordinance 1987 was promulgated."

ಇದರಲ್ಲಿ ಟೆಕ್ನಿಕಲ್ ಲ್ಯಾಕುನ ಇದೆ, ಅದಕ್ಕೋಸ್ಕರ ಪುನಃ ತಿದ್ದುಪಡಿ ತಂದಿದ್ದೇವೆ ಎಂದು ತಂದಿದ್ದೀರಿ, ಇದಕ್ಕಿಂತ ಮುಂಚೆ ಈಗಾಗಲೇ ಆರ್ಡಿನೆನ್ಸ್ ಇಷ್ಟೂ ಮಾಡಿ ಈಗ ನಮ್ಮ ಮುಂದೆ ಇಟ್ಟಿದ್ದಾರೆ. ಯಾವ ಕಾರಣಕ್ಕಾಗಿ ಟೆಕ್ನಿಕಲ್ ಲ್ಯಾಕುನ ಇದೆ ಎಂಬುದನ್ನು ಹೇಳುತ್ತಿದ್ದಾರೆ? ಹೈಕೋರ್ಟಿನಲ್ಲಿ ಏನೋ ಹೊಡೆದು ಹಾಕಿದ್ದಾರೆ ಎಂದು ಹೇಳಿದರೆ ಒಪ್ಪೋಣ. ಅವರು ಇಬ್ಬರನ್ನು ಬಿಟ್ಟಿದ್ದಾರೆ. ನೀವು ೧೯ ಜನರನ್ನು ಯಾವ ಕಾರಣಕ್ಕಾಗಿ ಬಿಟ್ಟಿದ್ದೀರಿ? ಅಲ್ಲಿ ಟೆಕ್ನಿಕಲ್ ಲ್ಯಾಕುನ ಏನಿದೆ? ಹೈಕೋರ್ಟಿನವರು ಹೇಳಿದಮೇಲೆ, ಇಂತಿಂಥ ತೊಂದರೆ ಇದೆ ಈ ಕಾನೂನಿನಲ್ಲಿ ಎಂದಾಗ ಅದು ನಿಮ್ಮ ನಜರಿಗೆ ಬಂತು. ಆದರೆ ೧೫ ಜನರನ್ನು ನೀವು ಬಿಡುಗಡೆ ಮಾಡಿದ್ದೀರಿ, ೪ ಜನರನ್ನು ಅಡ್ವೈಸರಿ ಬೋರ್ಡ್ ಬಿಡುಗಡೆ ಮಾಡಿದೆ, ಇದನ್ನು ಯಾವ ಆಧಾರದ ಮೇಲೆ ಮಾಡಿದ್ದೀರಿ? ಯಾವ ಕಾರಣಕ್ಕೆ ಮಾಡಿದ್ದೀರಿ? ಕಾರಣ ಸರಿಯಾಗಿಲ್ಲದೇ ಹೋದರೆ ಅರೆಸ್ಟ್ ಏತಕ್ಕೆ ಮಾಡಿದಿರಿ? ಇದರ ಬಗ್ಗೆ ವಿವರ ಕೊಡಬೇಕು. ಕೇವಲ ಗೂಂಡಾಗಳಿಗೆ ಸಂಬಂಧಪಟ್ಟ ಕಾನೂನಲ್ಲ ಇದು. ಇದರಲ್ಲಿ ಆರು ಕ್ಯಾಟಗರಿ ಜನ ಬರುತ್ತಾರೆ. ಬೂಟ್ ಲೆಗ್ಗರ್ಸ್, ಡ್ರಗ್ ಆಫೆಂಡರ್ಸ್, ಗ್ಯಾಂಬ್ಲರ್ಸ್, ಗೂಂಡಾಸ್, ಇಮ್ಮೋರಲ್ ಟ್ರಾಫಿಕ್ ಆಫೆಂಡರ್ಸ್ ಮತ್ತು ಸ್ಲಂ ಗ್ರಾಬರ್ಸ್ ಇಷ್ಟು ಜನ ಬರುತ್ತಾರೆ. ನೀವು ಎಷ್ಟು ಜನ ಬೂಟ್‌ಲೆಗ್ಗರ್ಸನ್ನು ಹಿಡಿದಿದ್ದೀರಿ. ಎಷ್ಟು ಜನರ ಮೇಲೆ ಕೇಸ್ ಹಾಕಿದ್ದೀರಿ? ಎಷ್ಟು ಜನ ಜೈಲ್‌ನಲ್ಲಿದ್ದಾರೆ? ಡ್ರಗ್ ಆಫೆಂಡರ್ಸ್ ಕೆಳಗೆ ಎಷ್ಟು ಜನ ಇದ್ದಾರೆ? ಇಲ್ಲಿ ಹೇಳಿರುವ ೬ ಕ್ಯಾಟಗರಿಯಲ್ಲಿ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ? ಎಷ್ಟು ಕಡೆ ಈ ಕಾನೂನನ್ನು ಚಲಾಯಿಸಿದ್ದೀರಿ? ಇದನ್ನು ಹೇಳಬೇಕು. ನಿಮಗೆ ಬೇಕಾದಹಾಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ಮಾಡಿದರೆ ಅದು ಬೇರೆ ವಿಚಾರ. ಅದು ದುರುಪಯೋಗವಾಗುತ್ತದೆ. ಮೊನ್ನೆ ಗುರುಮಿಠಕಲ್ ವಿಚಾರ ಬಂತು. ಈ ಸದನದಲ್ಲಿ ಹೇಳಿದರು. ಕೆಲವು ಜನ ಗೂಂಡಾಗಳಿದ್ದರು. ಅವರ ಸಹವಾಸದಲ್ಲಿ ಒಳ್ಳೆಯವರು ಸಿಕ್ಕಿದ್ದರಿಂದ ಹೀಗಾಯಿತು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

ಅಧ್ಯಕ್ಷರು.—ಖಾರ್ಗೆಯವರೆ, ನಾಳೆ ಕಂಟಿನ್ಯೂ ಮಾಡಿ. ಈಗ ಸಭೆ ಮುಂದೂಡಲಾಗಿದೆ. ಚರ್ಚೆ ನಾಳೆ ಮುಂದುವರೆಯುವುದು. ನಾಳೆ ಬೆಳಿಗ್ಗೆ ೧೧ ಗಂಟೆಗೆ ಸಭೆಯನ್ನು ಮುಂದೂಡಲಾಗಿದೆ.

(ಸದನವು ಸಂಜೆ ೫ ಗಂಟೆಗೆ ಮುಕ್ತಾಯವಾಗಿ ಮುಂದಿನ ತಾರೀಖು ೩ನೇ ಫೆಬ್ರವರಿ ೧೯೮೭ರ ೧೧ ಗಂಟೆಗೆ ಮತ್ತೆ ಸಮಾವೇಶಗೊಳ್ಳಲು ನಿಶ್ಚಯಿಸಿತು)